(೧೩) ಕಾಪು ಪೋಲೀಸ್ ಔಟ್ ಪೋಸ್ಟ್ ಸಿಬ್ಬಂದಿಗೆ ಗೃಹ ನಿರ್ಮಾಣ ವ್ಯವಸ್ಥೆ ಮಾಡುವುದು

ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಕಾಪು ಪೋಲೀಸ್ ಔಟ್ ಪೋಸ್ಟಿನ ಸಿಬ್ಬಂದಿಯವರ ಗೃಹ ನಿರ್ಮಾಣಕ್ಕೆ ಸ್ಥಳ ಮಂಜೂರಾಗಿ ಸುಮಾರು ೨೫ ವರ್ಷಗಳು ಕಳೆದಿವೆ ಕಾಪುವಿನಲ್ಲಿ ಕ್ವಾರ್ಟರ್ಸ್‌ಗಳಿಲ್ಲದೆ ಸಿಬ್ಬಂದಿಯವರು ಏಳೆಂಟು ಕಿಲೋಮೀಟರ್ ದೂರದ ಶಿರ್ವಕ್ಕೆ ಹೋಗಬೇಕಾಗಿದೆ. ರಾತ್ರಿ ಹೊತ್ತು ಒಬ್ಬರೇ ಸೆಂಟ್ರಿ ಇರುತ್ತಾರೆ. ಅನೇಕ ದೇವಾಸ್ಥಾನಗಳಿರುವ ಈ ಪ್ರದೇಶದಲ್ಲಿ ಕಾವಲು ಹಾಗೂ ರಕ್ಷಣೆ ವಿಚಾರದಲ್ಲಿ ಸರಕಾರ ಅಲಕ್ಷ್ಯ ತೋರಿರುವುದು ಪರಮ ಅನ್ಯಾಯ. ಕಾಪುವಿನಲ್ಲಿ ಪೋಲೀಸರಿಗೆ ಗೃಹ ನಿರ್ಮಾಣ ಮಾಡಿಸಿಕೊಡಲು ಸರಕಾರ ಇನ್ನಾದರೂ ಸೂಕ್ತ ಕ್ರಮ ಕೈಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಜಾಲಪ್ಪನವರ ಪರವಾಗಿ).—ಅಧ್ಯಕ್ಷರೇ, ಕಾಪು ಪೋಲೀಸ್ ಹೊರವಲಯ ಠಾಣೆಯ ಸಿಬ್ಬಂದಿಗಾಗಿ ೦.೦೭ ಸೆಂಟ್ (ಸರ್ವೆ ನಂಬರು:೪೦:೨) ೦.೩೨ ಸೆಂಟ್ಸ್ (ಸರ್ವೆ ನಂಬರು ೧೨೨:೧೬) ಮತ್ತು ೦.೪೧ ಸೆಂಟ್ಸ್ (ಸರ್ವೆ ನಂಬರು ೧೨೨:೧೩) ಜಮೀನನ್ನು ಪಡು ಹಳ್ಳಿಯಲ್ಲಿ ಪೋಲೀಸ್ ಇಲಾಖೆಯು ವಶಕ್ಕೆ ತೆಗೆದುಕೊಂಡಿದ್ದು ಇಲ್ಲಿ ಕಾಪು ಹೊರವಲಯ ಠಾಣೆಯ ಸಿಬ್ಬಂದಿಗೆ ವಸತಿಗೃಹಗಳನ್ನು ನಿರ್ಮಿಸಲು ಉದ್ದೇಶಿಸಿದೆ.

ಕರ್ನಾಟಕ ರಾಜ್ಯ ಪೋಲೀಸ್ ವಸತಿ ನಿಗಮವು ರಾಜ್ಯದೆಲ್ಲೆಡೆ ಪೋಲೀಸರಿಗೆ ವಸತಿ ಗೃಹಗಳ ನಿರ್ಮಾಣವನ್ನು ಹಂತ ಹಂತವಾಗಿ ಕೈಗೆತ್ತಿಕೊಂಡಿದೆ. ಕಾಪು ಹೊರವಲಯ ಠಾಣೆಯ ಸಿಬ್ಬಂದಿಗ್ಲೆ ವಸತಿ ಗೃಹಗಳನ್ನು ಈ ನಿಗಮವು ನಿರ್ಮಿಸುತ್ತದೆ. ಹಣಕಾಸಿನ ಅಭಾವದಿಂದ ಈ ಸದ್ಯಕ್ಕೆ ಕೆಲಸವನ್ನು ಕೈಗೆತ್ತಿಕೊಂಡಿಲ್ಲ.

ಕಾಪು ಹೊರವಲಯ ಠಾಣೆಯ ಸಿಬ್ಬಂದಿಯ ೧ ಹೆಚ್.ಸಿ ಮತ್ತು ೪ ಪಿ.ಸಿ.ಗಳನ್ನು ಒಳಗೊಂಡಿರುತ್ತದೆ.

(೧೪) ಪುತ್ತೂರು ತಾಲ್ಲೂಕಿನ ಕೈಕಂಬ ರಸ್ತೆಯಲ್ಲಿ ಸೇತುವೆ ನಿರ್ಮಾಣ

† ಶ್ರೀ ವಿನಯ ಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕೈಕಂಬ, ಪೆರಿಯಶಾಂತಿ, ಧರ್ಮಸ್ಥಳ ರಸ್ತೆಯನ್ನು ರಾಜ್ಯ ರಸ್ತೆಯನ್ನಾಗಿ ಮಾರ್ಪಾಡು ಆಗಿದ್ದು ಈ ರಾಜ್ಯ ರಸ್ತೆಗೆ ಹೊಂದಿಕೊಂಡು ಈಗಾಗಲೇ ರಸ್ತೆಯ ರಚನೆಯಾಗಿದ್ದು ಸದ್ರಿ ಮಾರ್ಗದ ಇಚ್ಲಂಪಾಡಿಯವರೆಗೆ ವಾಹನ ಸಂಚಾರ ಅನುಕೂಲತೆಯಿದೆ. ಆದರೆ ಮಧ್ಯದಲ್ಲಿ ಒಂದು ಸೇತುವೆ ಇಲ್ಲದೆ ಇರುವ ಕಾರಣ ರಸ್ತೆ ಸಂಚಾರಕ್ಕೆ ಅಡ್ಡಿಯಾಗಿದೆ. ಕೈಕಂಬ, ಪೆರಿಯಾಶಾಂತಿ, ಕೈಕಂಬ ರಸ್ತೆಯು ವ್ಯವಸ್ಥಿತವಾಗಿ ನಿರ್ಮಾಣವಾದರೆ ಸಾಧಾರಣ ೪೫ ಕಿ.ಮೀ. ಧರ್ಮಸ್ಥಳ, ಸುಬ್ರಮಣ್ಯ ರಸ್ತೆಯಲ್ಲಿ ಅಂತರ ಕಡಿಮೆಯಾಗುತ್ತದೆ. ಆದುದರಿಂದ ರಾಜ್ಯ ರಸ್ತೆಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಸೇತುವೆ ಹಾಗೂ ರಸ್ತೆಯ ಪೂರ್ತಿ ನಿರ್ಮಾಣಕ್ಕೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಕೂಡಲೇ ಕ್ರಮ ಕೈಗೊಳ್ಳುವಂತೆ ತಮ್ಮ ಮುಖಾಂತರ ಒತ್ತಾಯಪಡಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಸಚಿವರ ಗಮನಕ್ಕೆ ತಂದು ಇದಕ್ಕೆ ಉತ್ತರ ಕೊಡಿಸುತ್ತೇನೆ.

(೧೫) ಚಿಂಚೋಳಿತಾಲ್ಲೂಕು ಕೇಂದ್ರದಲ್ಲಿರುವ ಸರ್ಕಾರೀ ಆಸ್ಪತ್ರೆ ಕುಸಿದಿರುವುದು

ಶ್ರೀ ಎಂ. ವೀರಯ್ಯ ಸ್ವಾಮಿ,—ಮಾನ್ಯ ಅಧ್ಯಕ್ಷರೇ ಚಿಂಚೋಳಿ ತಾಲ್ಲೂಕು ಕೇಂದ್ರದಲ್ಲಿರುವ ೩೦ ಹಾಸಿಗೆಗಳ ಸರಕಾರಿ ಆಸ್ಪತ್ರೆ ಪೂರ್ತಿಯಾಗಿ ಕುಸಿದಿರುವ ಬಗ್ಗೆ ಈ ಮನೆಯಲ್ಲಿ ಹಲವಾರು ಬಾರಿ ಸರಕಾರದ ಗಮನ ಸೆಳೆದಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ಆರೋಗ್ಯ ಸಚಿವರು ಕೂಡಲೇ ಕುಸಿದಿರುವ ಕಟ್ಟಡದ ಸ್ಥಳದಲ್ಲಿ ಹೊಸದಾಗಿ ಕಟ್ಟಡ ಕೆಲಸ ಪ್ರಾರಂಭಿಸುವುದಾಗಿ ಕಳೆದ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.